**O.S.No./113/2017, DW-1**
**Date :13-03-2024.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

## ಮುಂದುವರೆದ ಪಾಟೀಸವಾಲು : ವಾದಿ ಪರ ವಕೀಲರಿಂದ

ನಿಮ್ಮ ಆಸ್ತಿಯಲ್ಲಿ ನೀವು ಪೂರ್ತಿಯಾಗಿ ಮನೆ ಕಟ್ಟಿರುತ್ತೀರಾ ಅಥವಾ ಖುಲ್ಲಾ ಜಾಗವನ್ನು ಸಹ ಬಿಟ್ಟಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮುಂದುಗಡೆ 20 ಅಡಿ ಖುಲ್ಲಾ ಜಾಗವನ್ನು ಬಿಟ್ಟಿದ್ದು, ಉಳಿಕೆ ಜಾಗದಲ್ಲಿ ಮನೆ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಮನೆಗೆ ಮುಂಭಾಗದಲ್ಲಿ ಮಾತ್ರ ಬಾಗಿಲು ಇದ್ದು, ಹಿಂಭಾಗದಲ್ಲಿ ಬಾಗಿಲು ಇರುವುದಿಲ್ಲ. ನಾನು ಹೊಲಮನೆ ಕೆಲಸ ಮಾಡುತ್ತೇನೆ. ನಾನು ಬೇರೆಯವರ ಜಮೀನಿನಲ್ಲಿ ಹೊಲಮನೆ ಕೆಲಸ ಮಾಡುತ್ತೇನೆ. ನಮ್ಮ ಮನೆಯಲ್ಲಿ ಒಟ್ಟು ನಾವು 3 ಜನ ಇರುತ್ತೇವೆ. ನಮ್ಮ ಮನೆಯ ಪೂರ್ವ ದಿಕ್ಕಿಗೆ ಬಹಳ ವರ್ಷಗಳಿಂದ ಒಂದು ಕಾಲುದಾರಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಮನೆಯ ದಕ್ಷಿಣ ದಿಕ್ಕಿಗೆ ವಾದಿಯರ ಆಸ್ತಿ ಇದ್ದು, ಅದನ್ನು ನಾನು ಅತೀಕ್ರಮಣ ಮಾಡಿ ಕಬ್ಜಗೆ ತೆಗೆದುಕೊಳ್ಳಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ.

(ಇಂದು ದಿನಾಂಕ 13-03-2024 ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು,
ಕೊಪ್ಪಳ.